## ಸಾಣೆ...



'ಸಾಣೆ... ಸಾಣೆ...' ಕೂಗು ಕೇಳಿ ಓಡಿ ಬಂದ ಕೇಶಿರಾಜ ಸಾಣೆ ಹಿಡಿಯುವಾತನನ್ನು ಹತ್ತಿರಕ್ಕೆ ಕರೆದ. 'ಏನ್ ಸಾಮಿ, ಚಾಕು, ಕತ್ತರಿಗೆ ಸಾಣೆ ಹಿಡಿಯಬೇಕಾ?' ಕೇಳಿದ ಸಾಣೆಯವ. 'ಹತ್ತಿರಕ್ಕೆ ಬಾ' ಸನ್ನೆಮಾಡಿದ ಕೇಶಿ. ಅವನು ಆಶ್ಚರ್ಯದಿಂದ 'ಏನು ಸಾಮಿ?' ಅಂದ ಹತ್ತಿರಕ್ಕೆ ಬಂದು. 'ನೀನು ಕೇವಲ ಹರಿತ ಮಾಡುವುದನ್ನು ಕಲಿತಿದ್ದೀಯಾ ಅಥವಾ ಮೊಂಡು ಮಾಡಲೂ ಬರುತ್ತದಾ?' ಮೆಲ್ಲಗೆ, ಅತಿಮೆಲ್ಲಗೆ ಕೇಳಿದ. 'ಏನನ್ನು ಮೊಂಡು ಮಾಡಬೇಕು ಸಾಮಿ?' ಅಷ್ಟೆ ಮೆಲ್ಲಗೆ ಕೇಳಿದ ಸಾಣೆಯವ. ಕೇಶಿ ಒಮ್ಮೆ ಹಿಂತಿರುಗಿ ನೋಡಿದ, ಸೊಳ್ಳೆ ಇರಲಿ, ಗಾಳಿಯೂ ಒಳಗೆ ಹೋಗದಂತೆ ಲಕ್ಷಣವಾಗಿ ಬಾಗಿಲಲ್ಲಿ ನಿಂತಿದ್ದ ಕಾಂತೆಯನ್ನು ನೋಡಿ ಬೆವರಿದ, ಬೆದರಿದ; ಕಾಲು ನಡುಗಿತು, ಬಾಯಿ ಒಣಗಿತು. ತನ್ನ ನಾಲಿಗೆಯನ್ನೇ ಹೊರಗೆ ಚಾಚಿ ತೋರಿಸಿದ. ಸಾಣೆಯವನಿಗೆ ಅರ್ಥವಾಯಿತು. 'ಇಲ್ಲ ಸಾಮಿ, ನಾನಿದನ್ನ ಕಲಿತಿಲ್ಲ' ಎಂದ ಕನಿಕರದಿಂದ.

**ಕೃಷ್ಣವೇಣಿ ರಾಮಸ್ವಾಮಿ**

---



## ಇನ್ಸಲ್ಟಿಂಗ್ ಫೀ

ಕೆಮ್ಮು–ನೆಗಡಿ ಎಂದು ವೈದ್ಯರ ಬಳಿ ಹೋಗಿದ್ದ ಪರಮೇಶಿ, ಅನಂತರ ಬಿಲ್ಲಿಂಗ್ ಕೌಂಟರ್‌ಗೆ ಹೋದ. ಕನ್ಸಲ್ಟೇಶನ್ ಫೀ 400 ರೂಪಾಯಿ ಎಂದಾಗ ಆಕ್ಷೇಪಿಸುತ್ತ ಮತ್ತೆ ವೈದ್ಯರಲ್ಲಿಗೆ ಹೋದ. 'ಡಾಕ್ಟ್ರೇ, ನಿಮ್ಮ ಕನ್ಸಲ್ಟೇಶನ್ ಫೀ 200 ರೂಪಾಯಿ ಅಲ್ಲವೆ? ಬಿಲ್ಲಿಂಗ್ ಕೌಂಟರ್‌ನಲ್ಲಿ 400 ರೂಪಾಯಿ ಕೇಳ್ತಿದ್ದಾರೆ' ಎಂದ. 'ನೀವು ವೇಟಿಂಗ್ ರೂಮಿನಲ್ಲಿ ಕುಳಿತಾಗ ನರ್ಸ್ ಬಳಿ ನಿಮ್ಮ ಡಾಕ್ಟರೇನು ದೊಡ್ಡ ಪಿಸ್ತಾನಾ? ಎಷ್ಟೊತ್ತು ಕಾಯಿಸ್ತಾರಲ್ಲ, ಒಳಗೇನು ಕಾಡು ಹರಟೆ ಹೊಡಿತಾರಾ? ಅಂತ ಹೇಳಿದ್ದಕ್ಕೆ 200 ರೂಪಾಯಿ ಇನ್ಸಲ್ಟಿಂಗ್ ಫೀ ಸೇರಿಸಿ 400 ರೂಪಾಯಿ ಹಾಕಿದ್ದಾರೆ' ಎಂದರು ವೈದ್ಯರು.

**ವಿ. ವಿಜಯೇಂದ್ರ ರಾವ್**